**ಸಾಕ್ಷಿಯನ್ನು ದಿನಾಂಕ: 10-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ ಎ ಎಂ ಕೆ ವಕೀಲರಿಂದ**

1. ದಾವಾ ಆಸ್ತಿಯು ಮೂಲತಃವಾಗಿ ವಾದಿಯ ತಂದೆ ನರಸಹನುಮಯ್ಯರವರಿಗೆ ಸೇರಿದ್ದಾಗಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಈರಮ್ಮರವರು ನರಸಹನುಮಯ್ಯರವರಿಗೆ ಯಾವ ರೀತಿ ಸಂಬಂಧಿಕರ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನರಸಹನುಮಯ್ಯನ ತಂಗಿಯೇ ಈರಮ್ಮರವರು ಎಂದರೆ ಸರಿಯಲ್ಲ. ಸದರಿ ಈರಮ್ಮರವರಿಗೆ ನರಸಹನುಮಯ್ಯರವರು ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಈರಮ್ಮರವರು ಕ್ರಯಕ್ಕೆ ಪಡೆದ ನಂತರ ದಾವಾ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಅಧಿಕಾರ ಮತ್ತು ಸ್ವಾಧೀನದಲ್ಲಿದ್ದರು ಎಂದರೆ ಸರಿ. ವಾದಿ ನನ್ನ ಸಂಬಂಧಿಕರಲ್ಲ. ವಾದಿ ನನ್ನ ಹತ್ತಿರ ಸಂಬಂಧಿ ಎಂದು ಪ್ರತಿವಾದ ಪತ್ರ ಹಾಗೂ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆಂದರೆ ಸರಿಯಲ್ಲ.

2. ದಾವಾ ಸ. ನಂ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ.ನ ಪೋಡಾಗಿರುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಈರಮ್ಮನವರು ನನ್ನ ಮಗ ಹಾಗೂ ಮಗಳ ಹೆಸರಿಗೆ ದಿಃ 24.04.2008 ರಲ್ಲಿ ವಿಲ್ ನ್ನು ಬರೆದಿರುತ್ತಾರೆಂದರೆ ಸರಿ. ಈರಮ್ಮರವರು ತೀರಿಕೊಂಡ ನಂತರ ದಾವಾ ಆಸ್ತಿಯು ನನ್ನ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನ್ನ ಮಕ್ಕಳಿಗೆ ಮಾತ್ರ ಹಕ್ಕು ಅಧಿಕಾರ ಇತ್ತು ಎಂದರೆ ಸರಿ. ದಾವಾ ಆಸ್ತಿಯನ್ನು ನನ್ನ ತಾಯಿ 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನಾನು, 2 ಮತ್ತು 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತೇವೆಂದರೆ ಸರಿ. ಸದರಿ ಕ್ರಯಪತ್ರಕ್ಕೆ ನನ್ನ ಸಹೋದರಿಯರು ಸಹಿಗಳನ್ನು ಮಾಡಿರುವುದಿಲ್ಲ. ಮಧುಗಿರಿ ನ್ಯಾಯಾಲಯದಲ್ಲಿ ನನ್ನ ಮಕ್ಕಳ ಪರವಾಗಿ ತೀರ್ಮಾನವಾದ ಕಾರಣ ನಾನು ನನ್ನ ಸಹೋದರಿಯರ ಸಹಿಗಳನ್ನು ಕ್ರಯಪತ್ರಕ್ಕೆ ಮಾಡಿಸಿರುವುದಿಲ್ಲ. ನನ್ನ ತಾಯಿ ಸುಮಾರು 15 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಯನ್ನು ಬಿಟ್ಟು ಬೇರೆ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿಗಳು ಇರುವುದಿಲ್ಲ.

3. 2011 ನೇ ಸಾಲಿನಲ್ಲಿ ನಮ್ಮ ಕುಟುಂಬಕ್ಕೆ ಹಣಕಾಸಿನ ತೊಂದರೆ ಇತ್ತು ಎಂದರೆ ಅದರ

ಬಗ್ಗೆ ನನ್ನ ತಾಯಿಗೆ ಗೊತ್ತು. ನನ್ನ ತಾಯಿ ತೀರಿಕೊಂಡ ನಂತರ ನಾವು ಜೀವನ ನಡೆಸಲು ಕಷ್ಟ ಆಗಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯಿಂದ ಬರುವ ಆದಾಯ ನಾವು ಜೀವನ ನಡೆಸಲು ಸಾಕಾಗುತ್ತಿರಲ್ಲಿ ಎಂದರೆ ಸರಿಯಲ್ಲ. ನಾನು ಬೇರೆ ಕಡೆ ಸಾಲವನ್ನು ಮಾಡಿರುವುದಿಲ್ಲ. ನನ್ನ ತಾಯಿ ಜೀವಿತಾವಧಿಯಲ್ಲಿ ನಾನು ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ. ದಾವಾ ಆಸ್ತಿ ಬಗ್ಗೆ ತಾಯಿ ಏನು ವ್ಯವಹಾರ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡಲು ನನ್ನ ತಾಯಿಯ ಒಪ್ಪಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಏಕೆ ಮಾರಾಟ ಮಾಡಬೇಕೆಂದು ತೀರ್ಮಾನ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ನನ್ನ ತಾಯಿ ತೀರಿಕೊಂಡ ನಂತರ ದಾವಾ ಆಸ್ತಿಯಲ್ಲಿ ನಾನು ಮತ್ತು ನನ್ನಮಕ್ಕಳು ಸ್ವಾಧೀನದಲ್ಲಿದ್ದೆವೆಂದರೆ ಸರಿ. ನಾನು ಮತ್ತು ನನ್ನ ಮಕ್ಕಳು ದಾವಾ ಆಸ್ತಿಯನ್ನು 4 ಲಕ್ಷ ರೂಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡು ಮುಂಗಡವಾಗಿ 3 ಲಕ್ಷ 75 ಸಾವಿರ ರೂಗಳನ್ನು ಪಡೆದುಕೊಂಡು ವಾದಿ ಹೆಸರಿಗೆ ದಿಃ 04.02.2011 ರಂದು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತೇವೆಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ನಮ್ಮ ವಿರುದ್ದ ಕ್ರಯದ ಕರಾರಿನ ಆಧಾರದ ಮೇಲೆ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ 4 ನೇ ಪ್ರತಿವಾದಿ ಪರವಾಗಿ ಆದೇಶ ಆಗಿರುತ್ತದೆ. ಸದರಿ ದಾವೆಯಲ್ಲಿ ನಾನು ವಿಚಾರಣೆಯನ್ನು ನೀಡಿರುತ್ತೇನೆ. ಆ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ, ವಿಚಾರಣೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಹೆಸರಿಗೆ ನನ್ನ ತಾಯಿ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ, ನಾನು ಬರೆದುಕೊಟ್ಟಿರುವುದಿಲ್ಲ. ಸದರಿ ಕರಾರು ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಹಾಗೂ ಸದರಿ ದಾಖಲೆ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ.

4. 4 ನೇ ಪ್ರತಿವಾದಿ ಹೆಸರಿಗೆ ನಾವು ಕ್ರಯಪತ್ರ ಬರೆದುಕೊಡುವುದಾಗಿ ಹೇಳಿರುತ್ತೇವೆ. ಯಾವ ವರ್ಷದಲ್ಲಿ 4 ನೇ ಪ್ರತಿವಾದಿ ಹೆಸರಿಗೆ ಕರಾರುಪತ್ರ ವಾಗಿರುತ್ತದೆ ಎಂದು ಗೊತ್ತಿಲ್ಲ. 4 ನೇ ಪ್ರತಿವಾದಿ ಪರಿಚಯ ನನಗೆ ಇರಲಿಲ್ಲ, ನನ್ನ ತಾಯಿಗೆ ಅವರ ಪರಿಚಯ ಇತ್ತು. ನನ್ನ ತಾಯಿ ಜಮೀನಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಬಳಿ ಏನು ಹೇಳಿರುವುದಿಲ್ಲ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಕನ್ನಡ ಭಾಷೆಯಲ್ಲಿ ಸಹಿ ಮಾಡುವುದನ್ನು

ಕಲಿತಿರುತ್ತೇನೆ. ನನ್ನ ಮಕ್ಕಳು 6-7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ. ನನ್ನ ಸಹಿಯನ್ನು ನೋಡಿದರೆ ನನ್ನಿಂದ ಗುರುತಿಸಲು ಆಗುವುದಿಲ್ಲ. ನಿಪಿ-1(ಎಂ) ಸಹಿ ಯಾರದೆಂದು ನನಗೆ ಗೊತ್ತಿಲ್ಲ. ನಿಡಿ-2 ರಲ್ಲಿರುವ ರಾಜಣ್ಣನ ಸಹಿಗಳು ನನ್ನ ಸಹಿಗಳು ಅಲ್ಲವೋ ಎಂಬುದರಬಗ್ಗೆ ನನ್ನಿಂದ ಹೇಳಲಾಗುವುದಿಲ್ಲ. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಈ ದಾವೆಯ ವಿಚಾರ ನನ್ನ ತಾಯಿಗೆ ಗೊತ್ತು, ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಮತ್ತು ಪ್ರತಿವಾದಿ 2 ಮತ್ತು 3 ರವರು ವಾದಿಗೆ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದರೂ ಅವರಿಗೆ ಮೋಸ ಮಾಡುವ ಸಲುವಾಗಿ 4 ನೇ ಪ್ರತಿವಾದಿ ಹೆಸರಿಗೆ ಕರಾರು ಪತ್ರವನ್ನು ಸೃಷ್ಟಿಮಾಡಿರುತ್ತೇವೆಂದರೆ ಸರಿಯಲ್ಲ. 4 ನೇ ಪ್ರತಿವಾದಿ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಟ್ಟ ಎಷ್ಟು ವರ್ಷಗಳ ನಂತರ ನನ್ನ ತಾಯಿ ಮೃತಪಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಸರಿಗೆ ಕರಾರು ಪತ್ರವನ್ನು ಯಾವ ವರ್ಷದಲ್ಲಿ ಬರೆದುಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿಯು ಅವರ ವಕೀಲರ ಮೂಲಕ ಕ್ರಯಪತ್ರ ಬರೆದುಕೊಡುವಂತೆ ನಮಗೆ ನೋಟೀಸನುನ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ನೋಟೀಸ್ ಗೆ ನಾನು ಮತ್ತು ಪ್ರತಿವಾದಿ 2 ಮತ್ತು 3 ರವರು ಪ್ರತ್ಯುತ್ತರ ನೀಡಿರುತ್ತೇವೆಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಸರಿಗೆ ಕರಾರು ಪತ್ರವನ್ನು ಬರೆದುಕೊಟ್ಟಿರುವ ಬಗ್ಗೆ ನಾವು ನೀಡಿದ ಪ್ರತ್ಯುತ್ತರದಲ್ಲಿ ತಿಳಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ದಾಖಲಿಸಿದ ನಂತರ ನಾನು ಮತ್ತು 4 ನೇ ಪ್ರತಿವಾದಿ ಸೇರಿಕೊಂಡು ಕರಾರುಪತ್ರವನ್ನು ಸೃಷ್ಟಿಮಾಡಿಕೊಂಡು ಅದರ ಆಧಾರದ ಮೇಲೆ 4 ನೇ ಪ್ರತಿವಾದಿ OS 27/16 ರಂತೆ ದಾವೆಯನುನ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ನಾನು ಹಾಜರಾಗಿದ್ದು, ಉದ್ದೇಶಪೂರಕವಾಗಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಹಾಗೂ ಸಾಕ್ಷ್ಯವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡ ನಂತರ ನಾನು ಮತ್ತು 4 ನೇ ಪ್ರತಿವಾದಿ ಚೆನ್ನಾಗಿರುತ್ತೇವೆ. 4 ನೇ ಪ್ರತಿವಾದಿ ಬರೆದ ಕ್ರಯಪತ್ರದಲ್ಲಿನ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ, ಕ್ರಯಪತ್ರದ ಅಂಶಗಳು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟಾಗ ಅವರು ನಮಗೆ 2 ಲಕ್ಷ ಹಣ ನೀಡಿರುತ್ತಾರೆ. ಸದರಿ ಕ್ರಯಪತ್ರದಲ್ಲಿ ಕರಾರು ಪತ್ರದ ಬಗ್ಗೆ ಬರೆದಿರೂತ್ತಾರೋ

ಇಲ್ಲವೋ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಜೊತೆ ಯಾವುದೇ ವ್ಯವಹಾರ ಇಲ್ಲದೇ ಇದ್ದರೂ ವಾದಿಗೆ ಮೋಸ ಮಾಡುವ ಸಲುವಾಗಿ ನಾನು ಮತ್ತು 4 ನೇ ಪ್ರತಿವಾದಿ ಸೇರಿಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

5. ನಮ್ಮ ಕುಟುಂಬದ ಯಜಮಾನಿಕೆಯನ್ನು ನಾನೇ ನೋಡಿಕೊಳ್ಳುತ್ತೇನೆ. ವಾದಿ ಹೆಸರಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟಿರುವ ಬಗ್ಗೆ ನನಗೆ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಅವರು ಜೀವಿತಾವಧಿಯಲ್ಲಿ ಕ್ರಯಪತ್ರವನ್ನು ಬರೆದುಕೊಡುವಂತೆ ನಮಗೆ ಕೇಳಿರುವುದಿಲ್ಲ. ದಾವಾ ಆಸ್ತಿಯ ಪಕ್ಕದಲ್ಲಿ ವಾದಿಗೆ ಸೇರಿದ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಈ ದಾವೆಯನ್ನು ಏನು ಪರಿಹಾರಕ್ಕಾಗಿ ಸಲ್ಲಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಈ ದಾವೆ ವಿಚಾರವನ್ನು ನಾನು ತಿಳಿದುಕೊಳ್ಳಲು ಪ್ರಯತ್ನಪಟ್ಟಿರುವುದಿಲ್ಲ. ವಾದಿಯು ಕರಾರು ಪತ್ರದ ಆಧಾರದ ಮೇಲೆ ಈ ದಾವೆಯನ್ನು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**

ಓ.ಎಸ್. ನಂ. 250/2013
DW -1